# ನಗರಸಭಾ ಕಾರ್ಯಾಲಯ, ದೊಡ್ಡಬಳ್ಳಾಪುರ

ನಸದೊ/ತಾಂತ್ರಿಕ ವಿಭಾಗ/ಟಿ.ಎನ್.2/2007-08 ದಿನಾಂಕ:02-07-2007

## -:: ಅಲ್ಪಾವಧಿ ಟೆಂಡರ್ ಪ್ರಕಟಣೆ ::-

ದೊಡ್ಡಬಳ್ಳಾಪುರ ನಗರಸಭಾ ವ್ಯಾಪ್ತಿಯಲ್ಲಿ ಸರ್ಕಾರದಿಂದ 2006-07ನೇ ಸಾಲಿಗೆ ಬಿಡುಗಡೆಯಾಗಿರುವ ಹಾಗೂ 2007-08ನೇ ಸಾಲಿಗೆ ಬಿಡುಗಡೆಯಾಗಿರುವ ಎಸ್.ಎಫ್.ಸಿ. ಅನುದಾನದಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಕೈಗೆತ್ತಕೊಳ್ಳಲು ಉದ್ದೇಶಿಸಿದ್ದು, ಇವುಗಳನ್ನು ನಿರ್ವಹಿಸುವಂತೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಒಂದು ಮತ್ತು ಎರಡನೇ ದರ್ಜೆ ಗುತ್ತಿಗೆದಾರರಿಂದ ಐಟಂವಾರು ಟೆಂಡರನ್ನು ದ್ವಿಪ್ರತಿಯಲ್ಲಿ ಕರೆಯಲಾಗಿದೆ. ಖಾಲಿ ಟೆಂಡರ್ ದಸ್ತಾವೇಜಿನ ಅರ್ಜಿಗಳನ್ನು ನವೀಕೃತ ಗುತ್ತಿಗೆ ನೊಂದಣಿ (ಲೈಸನ್ಸ್) ಪ್ರಮಾಣಪತ್ರದ ಮೂಲ ನೊಂದಣಿ ಪಾಸ್‌ಬುಕ್‌ನೊಂದಿಗೆ ನಿಗಧಿತ ಶುಲ್ಕದೊಡನೆ (ಹಿಂದಿರುಗಿಸಲಾಗದ) ಅರ್ಜಿಯನ್ನು ಸಲ್ಲಿಸಿ, ದಿನಾಂಕ:12-07-2007ರೊಳಗೆ ಪಡೆಯತಕ್ಕದ್ದು, ಭರ್ತಿ ಮಾಡಿದ ಟೆಂಡರ್ ಲಕೋಟೆಗಳನ್ನು ಪೌರಾಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ ಇವರ ಕಛೇರಿಯಲ್ಲಿ ದಿನಾಂಕ:13-07-2007ರ ಸಾಯಂಕಾಲ 4.00ಗಂಟೆಯೊಳಗೆ ಪಿಡಬ್ಲ್ಯೂಡಿ.ಬಿ-65 ಮತ್ತು 66 ಮತ್ತು ಕೆಪಿಡಬ್ಲ್ಯೂಡಿ ಕೋಡ್ ಮತ್ತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 2000ರ ನಿಯಮಗಳನ್ನೊಳಪಟ್ಟು ಸ್ವೀಕರಿಸಲಾಗುವುದು. ಹಾಗೂ ಸಾಧ್ಯವಾದಲ್ಲಿ ಇದೇ ದಿನಾಂಕದಂದು ಟೆಂಡರ್‌ನ್ನು ತೆರೆಯಲಾಗುವುದು. ಅಥವಾ ಟೆಂಡರ್ ತೆರೆಯುವ ದಿನಾಂಕವನ್ನು ತಿಳಿಸಲಾಗುವುದು.

| ಕ್ರ. ಸಂ | ಕಾಮಗಾರಿಯ ಹೆಸರು | ಟೆಂಡರ್ ಗಿಟ್ಟ ಮೊತ್ತ (ಲಕ್ಷಗಳಲ್ಲಿ) | ಇಎಂಡಿ ಮೊತ್ತ (ರೂ.ಗಳಲ್ಲಿ) | ಟೆಂಡರ್ ಫಾರಂ ಬೆಲೆ (ರೂ.ಗಳಲ್ಲಿ) | ಗುತ್ತಿಗೆದಾರರ ದರ್ಜೆ | ಕಾಲಾವಧಿ (ಮಳೆಗಾಲ ಸೇರಿ) |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | ಪ್ಯಾಕೇಜ್ 1:- ನಗರಸಭಾ ವ್ಯಾಪ್ತಿಯ ವಿವಿಧ ಪ್ರದೇಶಗಳಲ್ಲಿ ಹೊಸದಾಗಿ 8ಕೊಳವೆ ಬಾವಿಗಳನ್ನು ಕೊರೆಯುವ ಕೆಲಸ. ವಾರ್ಡ್ ನಂ.1, ಸೋಮೇಶ್ವರ ಬಡಾವಣೆ, ವಾರ್ಡ್ ನಂ.7ರ ಸ್ಕೌಟ್ ಕ್ಯಾಂಪ್, ಪಾಲನಜೋಗಿಹಳ್ಳಿ ಕೆರೆ ಅಂಗಳದಲ್ಲಿ, ಆಲಹಳ್ಳಿ ಕೆರೆ ಅಂಗಳದಲ್ಲಿ ಹಾಗೂ ಕೊಳಚೆ ಪ್ರದೇಶಗಳಾದ ರೋಜಿಪುರ ಕಾಲೋನಿಯಲ್ಲಿ, ದರ್ಗಾಪುರ ಮತ್ತು ಸಂಜಯನಗರದಲ್ಲಿ ಹಾಗೂ ಹೊರ ವಲಯ ಕರೇನಹಳ್ಳಿಯಲ್ಲಿ | 12.00 | 18000.00 | 1200.00+ ತೆರಿಗೆ | 2ನೇ ದರ್ಜೆ ಗುತ್ತಿಗೆ ದಾರರು | 3ತಿಂಗಳು |
| 2 | ಪ್ಯಾಕೇಜ್ ನಂ.2: ಹೊಸದಾಗಿ ಪೈಪ್‌ಲೈನ್ ಹಾಕುವುದು ಮತ್ತು ಪೈಪ್‌ಲೈನ್ ಮುಂದುವರೆಸುವ ಕೆಲಸ, ನಗರಸಭಾ ವ್ಯಾಪ್ತಿಯ ವಾರ್ಡ್ ನಂ.1ರಿಂದ 31ವಾರ್ಡ್‌ಗಳಲ್ಲಿ ಹಾಗೂ ಕೊಳಚೆ ಪ್ರದೇಶ ಮತ್ತು ಆಶ್ರಯ ಬಡಾವಣೆಗಳಲ್ಲಿ ವಿವಿಧ ವ್ಯಾಸದ ಪೈಪ್ ಗಳನ್ನು ಅಳವಡಿಸುವುದು. ಕ್ರ.ಸಂ.1 ರಿಂದ 45ರ ವರೆಗಿನ ಕಾಮಗಾರಿಗಳು. | 33.00 | 33000.00 | 3300 + ತೆರಿಗೆ | 1ನೇ ದರ್ಜೆ ಗುತ್ತಿಗೆದಾರರು | 3ತಿಂಗಳು |
| 3 | ಪ್ಯಾಕೇಜ್ ನಂ.3: ನಗರಸಭಾ ವ್ಯಾಪ್ತಿಯ 31 ವಾರ್ಡ್ ಗಳಲ್ಲಿಕರೇನಹಳ್ಳಿ ಮತ್ತು ಆಶ್ರಯ ಲೇ ಔಟ್‌ಗಳಲ್ಲಿ ಹಾಗೂ ಸಾರ್ವಜನಿಕರ ಸ್ಮಶಾನಗಳಲ್ಲಿ ಮತ್ತು ಕೊಳಚೆ ಪ್ರದೇಶಗಳಲ್ಲಿ ಮೆಟಲ್‌ಹೈಲೈಡ್ ವಿದ್ಯುತ್ ಬೀದಿ ದೀಪಗಳನ್ನು ಅಳವಡಿಸುವ ಕೆಲಸ. | 10.00 | 15000.00 | 1000.00 +ತೆರಿಗೆ | 2ನೇ ದರ್ಜೆ ಗುತ್ತಿಗೆ ದಾರರು (ವಿದ್ಯುತ್) | 3ತಿಂಗಳು |
| 4 | ಪ್ಯಾಕೇಜ್ ನಂ.4: ನಗರದ ಆಶ್ರಯ ಬಡಾವಣೆಗಳಾದ ಕುರುಬರಹಳ್ಳಿ, ಮಾದಗೊಂಡನಹಳ್ಳಿ, ಮುತ್ಸಂದ್ರ, ಸಿದ್ದೇನಾಯಕನಹಳ್ಳಿ 1ರಿಂದ 7 ಕಾಮಗಾರಿಗಳು ಹಾಗೂ ಹಿಂದುಳಿದ ಪ್ರದೇಶವಾದ ಕರೇನಹಳ್ಳಿಯಲ್ಲಿ 1 ರಿಂದ 5ಕಾಮಗಾರಿಗೆ ಜಲ್ಲಿ ಮತ್ತು ಕಾಂಕ್ರೀಟ್ ರಸ್ತೆ ಮಾಡುವ ಕೆಲಸ. | 39.96 | 39960.00 | 3960.00+ ತೆರಿಗೆ | 1ನೇ ದರ್ಜೆ ಗುತ್ತಿಗೆ ದಾರರು | 3ತಿಂಗಳು |
| 5 | ಪ್ಯಾಕೇಜ್ ನಂ.5: ನಗರದ ವಿವಿಧ ಸ್ಥಳಗಳಲ್ಲಿ ನಿರ್ಮಲ ನಗರ ಮಾದರಿಯ ಶೌಚಾಲ ನಿರ್ಮಾಣದ ಕಾಮಗಾರಿ: (1) ತಾಲ್ಲೂಕು ಕಛೇರಿ ರಸ್ತೆ (2) ಹಳೇ ಬಸ್ ನಿಲ್ದಾಣ (3) ಸರ್ಕಾರಿ ಪದವಿ ಪೂರ್ವ ಕಾಲೇಜು ರಸ್ತೆ (4) ಕೊಂಗಾಡಿಯಪ್ಪ ಕಾಲೇಜು (5) ಡಿ. ಕ್ರಾಸ್ (6) ಆಶ್ರಯ ಲೇ ಔಟ್ | 40.00 | 40000.00 | 4000.00+ ತೆರಿಗೆ | 1ನೇ ದರ್ಜೆ ಗುತ್ತಿಗೆದಾರರು | 3ತಿಂಗಳು |

| 1 | 2 | 3 | 4 | 5 | 6 | 7 |
|---|---|---|---|---|---|---|
| 6 | ಪ್ಯಾಕೇಜ್ ನಂ.6 : ನಗರಸಭಾ ವ್ಯಾಪ್ತಿಯ ಕೊಳಚೆ ಪ್ರದೇಶಗಳಲ್ಲಿ ಶೌಚಾಲಯ ದುರಸ್ಥಿ ಕಾಮಗಾರಿಗಳು: (1)ಸಂಜಯನಗರ(2) ವೀರಭದ್ರನ ಪಾಳ್ಯ (3) ರೋಜಿಪುರ (4) ಕುಂಬಾರಪೇಟೆ (5) ಕಛೇರಿಪಾಳ್ಯ (6) ಮುತ್ತೂರು (7)ಸಿದ್ದೇನಾಯಕನಹಳ್ಳಿ (8) ತಿಪ್ಪಾಪುರ ರಸ್ತೆ (9) ಮುತ್ಸಂದ್ರ (10) ಡಿ.ಕ್ರಾಸ್ | 12.08 | 18120.00 | 1208.00+ ತೆರಿಗೆ | 2ನೇ ದರ್ಜೆ ಗುತ್ತಿಗೆ ದಾರರು | 3ತಿಂಗಳು |
| 7 | ಪ್ಯಾಕೇಜ್ ನಂ.7: ನಗರಸಭಾ ವ್ಯಾಪ್ತಿಯಲ್ಲಿ ಬರುವ ವಾರ್ಡ್ ನಂ.3ರಿಂದ ವಾರ್ಡ್ ನಂ.6ರ ವರೆಗೆ (8ಕಾಮಗಾರಿಗಳು) (1) ಮುತ್ಸಂದ್ರದಲ್ಲಿ ಬರುವ ರಸ್ತೆಗಳಿಗೆ ಡಾಂಬರೀಕರಣ,(2) ಮುತ್ಸಂದ್ರದಲ್ಲಿ ಬರುವ ಮಣ್ಣಿನ ರಸ್ತೆಗಳಿಗೆ ಜಲ್ಲಿ ರಸ್ತೆ (3) ಕೆರೆ ಅಂಗಳದಲ್ಲಿ ಬರುವ ರಸ್ತೆಗಳಿಗೆ ಕಾಂಕ್ರೀಟ್ ರಸ್ತೆ (4) ಅರ್ಕಾವತಿ ಬಡಾವಣೆಯ ಮುಖ್ಯ ರಸ್ತೆಗೆ ಜಲ್ಲಿ ರಸ್ತೆ (5) ಸಿದ್ದೇನಾಯಕನಹಳ್ಳಿ ವಸಂತನ ತೋಟದ ರಸ್ತೆಗೆ ಜಲ್ಲಿ ರಸ್ತೆ, (6) ಮುತ್ತೂರು ಮುನೇಶ್ವರ ದೇವಸ್ಥಾನದ ರಸ್ತೆಗೆ ಮರುಡಾಂಬರೀಕರಣ (7) ರಂಗಪ್ಪ ಸರ್ಕಲ್ ಗ್ಯಾರೇಜ್ ರಸ್ತೆಗೆ ಕಾಂಕ್ರೀಟ್ ರಸ್ತೆ, (8) ರಂಗಪ್ಪ ಸರ್ಕಲ್ ಗ್ಯಾರೇಜ್ ರಸ್ತೆಗೆ ಚರಂಡಿ. | 37.47 | 37470.00 | 3747.00+ ತೆರಿಗೆ | 1ನೇ ದರ್ಜೆ ಗುತ್ತಿಗೆದಾ ರರು | 3ತಿಂಗಳು |
| 8 | ಪ್ಯಾಕೇಜ್ ನಂ.8: ನಗರಸಭಾ ವ್ಯಾಪ್ತಿ ಯಲ್ಲಿ ಬರುವ ವಾರ್ಡ್ ನಂ.7 ರಿಂದ ವಾರ್ಡ್ ನಂ.8ರ ವರೆಗೆ ಬರುವ (8ಕಾಮಗಾರಿಗಳು) (1) ಶ್ರೀನಗರದ ಅಡ್ಡರಸ್ತೆಗಳಿಗೆ ಕಾಂಕ್ರೀಟ್ ರಸ್ತೆ, (2) ಶ್ರೀನಗರದಲ್ಲಿ ಬರುವ ಅಡ್ಡರಸ್ತೆಗಳಿಗೆ ಚರಂಡಿ ಕೆಲಸ, (3) ದರ್ಗಾಪುರ ದಲ್ಲಿ ಪಿಳ್ಳೇ ಗೌಡರ ಕ್ವಾರ್ಟಸ್ ಹತ್ತಿರ ಹಾಗೂ ಇತರೆ ಕಡೆ ಜಲ್ಲಿ ರಸ್ತೆ ಹಾಗೂ ಚರಂಡಿ,(4) ದರ್ಗಾಪುರ ಶನಿಮಹಾತ್ಮ ದೇವಸ್ಥಾನ ದಿಂದ ಬ್ರಾಹ್ಮಣರ ಸ್ಮಶಾನದ ರಸ್ತೆವರೆಗೆ ಜಲ್ಲಿ ರಸ್ತೆ ಹಾಗೂ ಚರಂಡಿ (5) ದರ್ಗಾಪುರ ಶನಿಮಹಾತ್ಮ ದೇವಸ್ಥಾನ ಮುಂಭಾಗದ ರಸ್ತೆಗೆ ಮರು ಡಾಂಬರೀಕರಣ, (6) ಭಜನೇಹಟ್ಟಿ ರಂಗಪ್ಪ ಸರ್ಕಲ್ ಹತ್ತಿರ ಡಕ್ ಸ್ಲ್ಯಾಬ್ ಕಲ್ವರ್ಟ್ (7) ನಿವೇಧಿತ ಶಾಲೆಯ ಪಕ್ಕದಿಂದ ತಿಪ್ಪಾಪುರ ರಸ್ತೆವರೆಗೆ ಕಲ್ಲು ಕಟ್ಟಡ ಚರಂಡಿ (8) 8ನೇ ವಾರ್ಡ್ ವ್ಯಾಪ್ತಿಯಲ್ಲಿ ಬರುವ ಒಳರಸ್ತೆಗಳಿಗೆ ಮರು ಡಾಂಬರೀಕರಣ | 37.78 | 37780.00 | 3778.00+ ತೆರಿಗೆ | 1ನೇ ದರ್ಜೆ ಗುತ್ತಿಗೆದಾ ರರು | 3ತಿಂಗಳು |
| 9 | ಪ್ಯಾಕೇಜ್ ನಂ.9: ನಗರಸಭಾ ವ್ಯಾಪ್ತಿಯಲ್ಲಿ ಬರುವ ವಾರ್ಡ್ ನಂ.9ರಿಂದ ವಾರ್ಡ್ ನಂ.12ರ ವರೆಗೆ ಬರುವ (8ಕಾಮಗಾರಿಗಳು) (1) ಸಂಜಯನಗರ ಟಿ.ವಿ. ಕೃಷ್ಣಪ್ಪನವರ ಮನೆಯಿಂದ ಲಕ್ಷ್ಮೀದೇವಸ್ಥಾನ ದವರೆಗೆ ಜಲ್ಲಿ ರಸ್ತೆ ಮತ್ತು ಚರಂಡಿ (2) ಚೈತನ್ಯ ನಗರದಿಂದ ಸಂಜಯನಗರದ ದೊಡ್ಡಚರಂಡಿ ಮೇಲೆ ಕವರಿಂಗ್ ಸ್ಲ್ಯಾಬ್ ಚಪ್ಪಡಿ ಕೆಲಸ (3) ಚೈತನ್ಯಗರದಲ್ಲಿ ಇರುವ ಜಲ್ಲಿರಸ್ತೆಗಳಿಗೆ ಡಾಂಬರೀಕರಣ (4) ಚೈತನ್ಯನಗರದ ವಿವಿಧ ಅಡ್ಡರಸ್ತೆ ಗಳಿಗೆ ಕಾಂಕ್ರೀಟ್ ಚರಂಡಿ (5) 9ನೇ ವಾರ್ಡ್‌ನಲ್ಲಿ ಬರುವ ಅಡ್ಡ ರಸ್ತೆಗಳಿಗೆ ಕಾಂಕ್ರೀಟ್ ಡಕ್‌ಸ್ಲ್ಯಾಬ್ (6) 10ನೇ ವಾರ್ಡ್ ಪೆರುಮಾಳ್ ಮನೆ ಮುಂಭಾಗ ಕಲ್ಲುಕಟ್ಟಡದ ಚರಂಡಿ (7) 10ನೇ ವಾರ್ಡ್ ಲಕ್ಷ್ಮೀದೇವಸ್ಥಾನ ಮುಖ್ಯ ರಸ್ತೆಗಳಲ್ಲಿ ಬರುವ ಅಡ್ಡರಸ್ತೆಗಳಿಗೆ ಡಾಂಬರೀಕರಣ (8) 12ನೇ ವೀರಭದ್ರನಪಾಳ್ಯ ವೈ.ನಾರಾಯಣಪ್ಪನವರ ಮನೆ ಮುಂಭಾಗ ರಸ್ತೆಗೆ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ. | 25.42 | 25330.00 | 2533.00+ ತೆರಿಗೆ | 1ನೇ ದರ್ಜೆ ಗುತ್ತಿಗೆದಾ ರರು | 3ತಿಂಗಳು |

| 1 | 2 | 3 | 4 | 5 | 6 | 7 |
|---|---|---|---|---|---|---|
| 10 | ಪ್ಯಾಕೇಜ್ ನಂ.10: ನಗರಸಭಾ ವ್ಯಾಪ್ತಿಯಲ್ಲಿ ಬರುವ ವಾರ್ಡ್ ನಂ.13 ರಿಂದ 16 (10ಕಾಮಗಾರಿಗಳು) (1) 13ನೇ ವಾರ್ಡ್ ಭುವನೇಶ್ವರಿ ನಗರ ಸ್ವಾಮಿ ಮನೆ ರಸ್ತೆಯಲ್ಲಿ ಜಲ್ಲಿರಸ್ತೆ ಮತ್ತು ಚರಂಡಿ, (2) 13ನೇವಾರ್ಡ್ ಭುವನೇಶ್ವರಿ ನಗರ ರಾಗಿಮಿಷಿನ್ ಎದುರು ರಸ್ತೆಯಲ್ಲಿ ಜಲ್ಲಿ ರಸ್ತೆ ಮತ್ತು ಚರಂಡಿ (3) 13ನೇವಾರ್ಡ್ ಭುವನೇಶ್ವರಿ ನಗರ ಮುಖ್ಯ ರಸ್ತೆ ಯಲ್ಲಿ ಎಡ ಮತ್ತು ಬಲಭಾಗದಲ್ಲಿ ಚರಂಡಿ ಹಾಗೂ ತಿಪ್ಪಾಪುರ ರಸ್ತೆಗೆ ಮರುಡಾಂಬರೀಕರಣ (4) 14ನೇ ವಾರ್ಡ್ ದೊರೆಸ್ವಾಮಿ ಮನೆ ಮುಂಭಾಗದ ರಸ್ತೆ ಡಾಂಬರೀಕರಣ (5)15ನೇ ವಾರ್ಡ್‌ನಲ್ಲಿ ಬರುವ ಅಡ್ಡ ರಸ್ತೆಗಳಿಗೆ ಡಕ್‌ಸ್ಲ್ಯಾಬ್ ಕಲ್ವರ್ಟ್ ಕೆಲಸ (6) 16ನೇ ವಾರ್ಡ್ ಗಾಂಧಿನಗರ ಅಮವಾಸ್ಯೆರವರ ಮನೆ ಮತ್ತು ಕುಶಾಲ್‌ರಾಜ್ ಮನೆಯಿಂದ ಪ್ರಸನ್ನಚಿತ್ರಮಂದಿರ ದವರೆಗೆ ಕಾಂಕ್ರೀಟ್ ಚರಂಡಿ ಮತ್ತು ಕಲ್ವರ್ಟ್ (7) 16ನೇ ವಾರ್ಡ್ ಕಲಾಸಿಪಾಳ್ಯ ಮುಖ್ಯ ರಸ್ತೆ ಯಲ್ಲಿ ಹಾಲಿ ಇರುವ ಚರಂಡಿ ಯನ್ನು ತೆರವುಗೊಳಿಸಿ, ಕಾಂಕ್ರೀಟ್ ಚರಂಡಿ ಮಾಡುವ ಕೆಲಸ (8) 16ನೇ ವಾರ್ಡ್ ಕಲಾಸಿಪಾಳ್ಯ ಅಪ್ಪಯ್ಯಣ್ಣ ರವರ ಮನೆ ಮುಂಭಾಗದಲ್ಲಿ ಮತ್ತು ಅಡ್ಡರಸ್ತೆಗಳಲ್ಲಿ ಹಾಗೂ ಇದೇ ವಾರ್ಡಿನ ಇತರೆ ಕಡೆ ಹಾಲಿ ಇರುವ ಚರಂಡಿ ತೆರವುಗೊಳಿಸಿ ಕಾಂಕ್ರೀಟ್ ಚರಂಡಿ (9) 16ನೇ ವಾರ್ಡ್ ಹೋಟೆಲ್ ಸುಬ್ರಮಣಿಯಪ್ಪ ಮನೆ ಯಿಂದ ಇಬ್ರಾಹಿಂಸಾಹೇಬ್ ಮನೆಯ ವರೆಗೂ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ಕಾಮಗಾರಿ (10) 16ನೇ ವಾರ್ಡ್ ರುಕ್ಮಾಂಗದ ಗುಪ್ತ ಮನೆ ಮುಂಭಾಗದ ರಸ್ತೆಗೆ ಮರು ಡಾಂಬರೀಕರಣ. | 37.16 | 37160.00 | 3716.00+ ತೆರಿಗೆ | 1ನೇ ದರ್ಜೆ ಗುತ್ತಿಗೆ ದಾರರು | 3ತಿಂಗಳು |
| 11 | ಪ್ಯಾಕೇಜ್ ನಂ.11: ನಗರಸಭಾ ವ್ಯಾಪ್ತಿಯಲ್ಲಿ ಬರುವ ವಾರ್ಡ್ ನಂ.17 ರಿಂದ 21ರ ವರೆಗೆ (12ಕಾಮಗಾರಿ ಗಳು) (1)17ನೇ ವಾರ್ಡ್ ಎಸ್.ಆರ್.ಪಿ. ಕ್ಲಿನಿಕ್ ಮುಂಭಾಗ ರಸ್ತೆಗೆ ಮರು ಡಾಂಬರೀಕರಣ (2) 18ನೇ ವಾರ್ಡ್ ಕೆ.ಸಿ.ಗೌರಮ್ಮನವರ ಮನೆ ಮುಂಭಾಗ ರಸ್ತೆಗೆ ಮರು ಡಾಂಬರೀಕರಣ (3) 18ನೇ ವಾರ್ಡ್ ಶೇಖರಪ್ಪನವರ ಮನೆ ಮುಂಭಾಗ ರಸ್ತೆಗೆ ಡಕ್ ಸ್ಲ್ಯಾಬ್ ಕಲ್ವರ್ಟ್ (4) 19ನೇ ವಾರ್ಡ್ ಯರ್ರಸ್ವಾಮಿ ಮತ್ತು ಅರಸಪ್ಪರವರ ಮನೆ ಹತ್ತಿರ ಬರುವ ರಸ್ತೆಗಳಿಗೆ ಕಾಂಕ್ರೀಟ್ ರಸ್ತೆ (5) 19ನೇವಾರ್ಡ್ ಅರಸಪ್ಪರವರ ಮನೆ ಹತ್ತಿರ ಬರುವ ರಸ್ತೆಗಳಿಗೆ ಚರಂಡಿ (6) 19ನೇ ವಾರ್ಡ್ ಕರೇನಹಳ್ಳಿ ರಾಜಮ್ಮನವರ ಮನೆ ಮುಂಭಾಗದ ರಸ್ತೆಗೆ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ (7) 19ನೇ ವಾರ್ಡ್ ದೇವರಾಜನಗರ ರಾಜ್‌ಕಮಾಲ್ ಟ್ಯಾಕೀಸ್‌ಮ್ಯಾನೇಜರ್ ಮನೆ ಮುಂಭಾಗ ರಸ್ತೆಗೆ ಕಾಂಕ್ರೀಟ್ ರಸ್ತೆ (8) 19ನೇ ವಾರ್ಡ್ ಮುನಿಸುಕ್‌ರಾಂ ಮನೆ ಮುಂಭಾಗ ರಸ್ತೆಗೆ ಕಾಂಕ್ರೀಟ್ ರಸ್ತೆ (9) 20ನೇ ವಾರ್ಡ್ ದರ್ಗಾಮೊಹಲ್ಲಾ ರಸ್ತೆಗೆ ಪೂರ್ವದಿಕ್ಕಿನ ಕಡೆ ಕಲ್ಲುಕಟ್ಟ ಚರಂಡಿ ಕೆಲಸ (10) 20ನೇ ವಾರ್ಡ್ ದರ್ಗಾಮೊಹಲ್ಲಾ ರಸ್ತೆಯಿಂದ ರಾಮ ಲಿಂಗಪ್ಪನವರ ಮನೆ ರಸ್ತೆಗೆ ಮರುಡಾಂಬರೀ ಕರಣ (11) 20ನೇ ವಾರ್ಡ್ ದರ್ಗಾ ಮೊಹಲ್ಲಾ ಸೋಮಣ್ಣನವರ ಅಂಗಡಿ ಎದುರು ರಸ್ತೆಯಲ್ಲಿ ಡಾಂಬರೀಕರಣ. (12) 21ನೇ ವಾರ್ಡ್ ಬೆಸ್ತರಪೇಟೆ ಮುಖ್ಯ ರಸ್ತೆಯಿಂದ ಎಂ.ಪಿ. ಚಿಕ್ಕಪ್ಪಟ್ಟಯ್ಯ ರವರ ಅಂಗಡಿ ಮುಂಭಾಗದವರೆಗೆ ಮತ್ತು ಎಂ.ಬಿ. ಜಯಶಂಕರ್ ಮನೆ ಮುಂಭಾಗದ ರಸ್ತೆ ಮರು ಡಾಂಬರು ಕೆಲಸ | 27.00 | 27000.00 | 2700.00+ ತೆರಿಗೆ | 1ನೇ ದರ್ಜೆ ಗುತ್ತಿಗೆ ದಾರರು | 3ತಿಂಗಳು |

| 1 | 2 | 3 | 4 | 5 | 6 | 7 |
|---|---|---|---|---|---|---|
| 11 | ಪ್ಯಾಕೇಜ್ ನಂ.12: ನಗರಸಭಾ ವ್ಯಾಪ್ತಿಯಲ್ಲಿ ಬರುವ ವಾರ್ಡ್ ನಂ.22 ರಿಂದ31ರವರೆಗಿನ ಹಾಗೂ ನಗರದ ಪ್ರಮುಖರಸ್ತೆಗಳು(13ಕಾಮಗಾರಿಗಳು) (1) 22ನೇ ವಾರ್ಡ್ ಸ್ವೀಪರ್ ಕಾಲೋನಿ ಹಿಂಭಾಗದ ಪಂಪ್ ಹೌಸ್ ಪಕ್ಕದಲ್ಲಿ ಕಲ್ಲು ಕಟ್ಟಡದ ಚರಂಡಿ ಕೆಲಸ (2) 22ನೇ ವಾರ್ಡ್ ಕಾಳಮ್ಮ ದೇವಸ್ಥಾನ ದಿಂದ ಗಾಂಧಿ ವೃತ್ತದವರೆಗೆ ಕಾಂಕ್ರೀಟ್ ಚರಂಡಿ ಮತ್ತು ಡೆಕ್ ಸ್ಲ್ಯಾಬ್ ಕೆಲಸ (3) 22ನೇ ವಾರ್ಡ್ ಗುಬ್ಬಣ್ಣ ಕಾಂಪ್ಲೆಕ್ಸ್ ಮುಂಭಾಗದಲ್ಲಿ ಮತ್ತು ಹಿಂಭಾಗದ ರಸ್ತೆಯಲ್ಲಿ ಕಾಂಕ್ರೀಟ್ ರಸ್ತೆ ಮಾಡುವ ಕೆಲಸ (4) 30ನೇ ವಾರ್ಡ್ ಇಸ್ಲಾಂಪುರ ನಿಸ್ಸಾರ್ ರವರ ಮಟನ್ ಸ್ಟಾಲ್ ಪಕ್ಕ ರಸ್ತೆಗೆ ಡಾಂಬರೀಕರಣ ಕಾಮಗಾರಿ (6ನೇ ಅಡ್ಡರಸ್ತೆ) (5) 30ನೇ ವಾರ್ಡ್ ಇಸ್ಲಾಂಪುರದಲ್ಲಿ ಇರುವ ಅಡ್ಡರಸ್ತೆಗಳಿಗೆ ಕಾಂಕ್ರೀಟ್ ರಸ್ತೆ ಮಾಡುವ ಕೆಲಸ (6) 30ನೇ ವಾರ್ಡ್ ಇಸ್ಲಾಂಪುರದಲ್ಲಿ ಇರುವ ಅಡ್ಡರಸ್ತೆಗಳಿಗೆ ಚರಂಡಿ ಹಾಗೂ ಡೆಕ್‌ಸ್ಲ್ಯಾಬ್ ಕಲ್ವರ್ಟ್ ನಿರ್ಮಿಸುವ ಕೆಲಸ (7) 31ನೇ ವಾರ್ಡ್ ಈಡಿಗರ ಸ್ಮಶಾನದ ಪಕ್ಕದ ಜಲ್ಲಿ ರಸ್ತೆಗೆ ಡಾಂಬರೀಕರಣ (8) 31ನೇ ವಾರ್ಡ್ ಮುತ್ಯಾಲಮ್ಮ ದೇವಸ್ಥಾನದ ಹತ್ತಿರ ಕರಿಗಿರಿ ರವರ ಮನೆ ಪಕ್ಕದ ರಸ್ತೆಗೆ ಡಾಂಬರೀಕರಣ, (9) ಸರ್ಕಾರಿ ಆಸ್ಪತ್ರೆ ಪಕ್ಕದಿಂದ ಜಿ.ಡಿ.ಲಕ್ಷ್ಮೀನಾರಾಯಣ ರವರ ಮನೆವರೆಗೆ ಮರುಡಾಂಬರೀ ಕರಣ (10) ಗಾಂಧಿ ವೃತ್ತದಿಂದ ರೋಜಿಪುರ ರಾಮಯ್ಯನವರ ಮನೆವರೆಗೂ ಕಲ್ಲುಕಟ್ಟಡದ ಚರಂಡಿ (11) ಹಳೇಬಸ್ ನಿಲ್ದಾಣದಲ್ಲಿ ಮರೆಗೋಡೆ ಹಾಗೂ ಅಂಗಡಿಗಳ ನಿರ್ಮಾಣ (12) ಸರ್ಕಾರಿ ಪದವೀ ಪೂರ್ವ ಕಾಲೇಜು ರಸ್ತೆಗೆ ಡಾಂಬರೀಕರಣ (13) ರೈಲ್ವೆ ಬ್ರಿಡ್ಜ್ ನಿಂದ ರಾಧಾ ಕೃಷ್ಣ ಮನೆ ಮುಂಭಾಗದವರೆಗೆ ಕಲ್ಲು ಕಟ್ಟಡ ಚರಂಡಿ ನಿರ್ಮಿಸುವುದು. | 40.84 | 40840.00 | 4084.00+ ತೆರಿಗೆ | 1ನೇ ದರ್ಜೆ ಗುತ್ತಿಗೆದಾರರು | 3ತಿಂಗಳು |
| 12 | ಪ್ಯಾಕೇಜ್ ನಂ.13: ನಗರಸಭಾ ವ್ಯಾಪ್ತಿಯಲ್ಲಿ ಬರುವ ತರಕಾರಿ ಮತ್ತು ಮಟನ್ ಮಾರ್ಕೇಟ್ ಮಳಿಗೆಗಳ ದುರಸ್ಥಿ ಮತ್ತು ಅಭಿವೃದ್ದಿ ಕಾಮಗಾರಿಗಳು-4 (1) ಮಟನ್ ಮತ್ತು ಚಿಕನ್ ಮಾರ್ಕೇಟ್ ದುರಸ್ಥಿ (2) ತರಕಾರಿ ಮಾರುಕಟ್ಟೆ ದುರಸ್ಥಿ (3) ಮಾರುಕಟ್ಟೆ ಓವರ್‌ಹೆಡ್ ಟ್ಯಾಂಕ್ ಹತ್ತಿರ ಶೌಚಾಲಯ ನಿರ್ಮಾಣ (4) ಸ್ಲ್ಯಾಟರ್‌ಹೌಸ್ ನಿರ್ಮಾಣ. | 20.00 | 30000.00 | 3000.00+ ತೆರಿಗೆ | 2ನೇ ದರ್ಜೆ ಗುತ್ತಿಗೆದಾರರು | 3ತಿಂಗಳು |
| 13 | ಪ್ಯಾಕೇಜ್ ನಂ.14: ನಗರಸಭಾ ವ್ಯಾಪ್ತಿಯಲ್ಲಿ ಬರುವ ಸ್ಮಶಾನಗಳ ಅಭಿವೃದ್ದಿ ಕಾಮಗಾರಿಗಳು-5 (1) ನಗರ್ತರ ಸ್ಮಶಾನಕ್ಕೆ ಹೋಗುವ ಸಂಪರ್ಕ ರಸ್ತೆ ಅಭಿವೃದ್ದಿ (2) ಕನಕದಾಸ ರಸ್ತೆ ಸ್ಮಶಾನಕ್ಕೆ ಹೋಗುವ ಸಂಪರ್ಕ ರಸ್ತೆ ಅಭಿವೃದ್ದಿ (3) ಸಂಜಯನಗರದ ಸ್ಮಶಾನಕ್ಕೆ ಹೋಗುವ ಸಂಪರ್ಕ ರಸ್ತೆ ಅಭಿವೃದ್ದಿ (4) ಗಂಗಾಧರಪುರದ ಸ್ಮಶಾನಕ್ಕೆ ಹೋಗುವ ಸಂಪರ್ಕ ರಸ್ತೆ ಅಭಿವೃದ್ದಿ ಕಾಮಗಾರಿ (5) ದರ್ಗಾದಲ್ಲಿರುವ ಮುಸ್ಲಿಂರ ಸ್ಮಶಾನಕ್ಕೆ ಹೋಗುವ ಸಂಪರ್ಕ ರಸ್ತೆ ಅಭಿವೃದ್ದಿ ಕಾಮಗಾರಿ. | 11.60 | 17400.00 | 1740.00+ ತೆರಿಗೆ | 2ನೇ ದರ್ಜೆ ಗುತ್ತಿಗೆದಾರರು | 3ತಿಂಗಳು |

-5-

**ಷರತ್ತುಗಳು:-**

1) ಇ.ಎಂ.ಡಿ. ಹಣವನ್ನು ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಪೌರಾಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ ರವರ ಹೆಸರಿನಲ್ಲಿ ಡಿ.ಡಿ. ಅಥವಾ ಎಫ್.ಡಿ.ಆರ್. ಮೂಲಕ ಪಡೆದು ಸಲ್ಲಿಸತಕ್ಕದ್ದು.

2) ಕಾಮಗಾರಿಗಳ ಗುಣಮಟ್ಟ ಕಾಪಾಡುವ ಹಿತದೃಷ್ಟಿಯಿಂದ ಪ್ಯಾಕೇಜ್‌ನ ಅಂದಾಜು ಮೊತ್ತಕ್ಕಿಂತ ಕಡಿಮೆ ದರ ನಮೂದಿಸಿದಲ್ಲಿ ಅಂದಾಜಿನ ವ್ಯತ್ಯಾಸದ ಮೊತ್ತದ ಹಣವನ್ನು ಡಿ.ಡಿ. ರೂಪದಲ್ಲಿ ಟೆಂಡರ್ ಜೊತೆ ಲಗತ್ತಿಸಿ ಸಲ್ಲಿಸಬೇಕು, ತಪ್ಪಿದಲ್ಲಿ ಟೆಂಡರ್ ತಿರಸ್ಕರಿಸಲಾಗುವುದು.

3) ಸರ್ಕಾರದಿಂದ ಬಿಡುಗಡೆಯಾಗುವ ಅನುದಾನಕ್ಕೆ ಅನುಗುಣವಾಗಿ ಕ್ರಮವಾಗಿ ಕಾಮಗಾರಿಗಳ ಕಾರ್ಯಾದೇಶ ನೀಡಲಾಗುವುದು.

4) ಕಾಮಗಾರಿಗಳು ಗುತ್ತಿಗೆದಾರರ ಟೆಂಡರ್ ದರಗಳು ಒಂದು ವರ್ಷ (ಟೆಂಡರ್ ಕರೆದ ದಿನಾಂಕದಿಂದ) ಅವಧಿಯ ಸಿಂಧುತ್ವ ಹೊಂದಿರುತ್ತದೆ.

5) ಕಾಮಗಾರಿಗಳು ಪೂರ್ಣಗೊಂಡ ನಂತರ 3ನೇ ಪಾರ್ಟಿಯಿಂದ ಕಾಮಗಾರಿ ಗುಣಮಟ್ಟದ ಬಗ್ಗೆ ದೃಢೀಕರಣ ಪತ್ರವನ್ನು ಸಲ್ಲಿಸಿದ ನಂತರ ಬಿಲ್ ಪಾವತಿಗೆ ಕ್ರಮ ಕೈಗೊಳ್ಳಲಾಗುವುದು,

6) ಎರಡು ವರ್ಷ ನಿರ್ವಹಣಾ ವೆಚ್ಚವನ್ನು ಗುತ್ತಿಗೆದಾರರೇ ಬರಿಸುವುದು.

7) ಟೆಂಡರ್‌ಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಸಕ್ಷಮ ಪ್ರಾಧಿಕಾರಿ ಕಾಯ್ದಿರಿಸಿಕೊಂಡಿರುತ್ತದೆ,

8) ಟೆಂಡರ್ ನಿಬಂಧನೆಗಳು ಹಾಗೂ ಇತರೆ ಹೆಚ್ಚಿನ ಮಾಹಿತಿಗಳನ್ನು ಕಛೇರಿಯ ವೇಳೆಯಲ್ಲಿ ಪಡೆದು ತಿಳಿದುಕೊಳ್ಳುವುದು.

| | | |
|---|---|---|
| **ಸಹಿ:-** | **ಸಹಿ:-** | **ಸಹಿ:-** |
| **(ಡಿ.ಕೆ. ರಂಗಸ್ವಾಮಿ), ಭಾ.ಆ.ಸೇ.** | **(ಕೆ.ಕೆ.ಜಾಲಿಬೇರಿ)** | **(ಕೆ.ಎಂ.ರಾಮಪ್ಪ)ಕೆ.ಎಂ.ಎ.ಎಸ್.** |
| ಆಡಳಿತಾಧಿಕಾರಿಗಳು | ಸಹಾಯಕ ಕಾರ್ಯಪಾಲಕ ಅಭಿಯಂತರರು | ಪೌರಾಯುಕ್ತರು, |
| ನಗರಸಭೆ, ದೊಡ್ಡಬಳ್ಳಾಪುರ. | ನಗರಸಭೆ, ದೊಡ್ಡಬಳ್ಳಾಪುರ. | ನಗರಸಭೆ, ದೊಡ್ಡಬಳ್ಳಾಪುರ. |